ರೀತಿಯಿಂದ ಅದನ್ನು ಪರಿಗಣಿಸಿ ಅಲ್ಲೂರು ಗ್ರಾಮಕ್ಕೆ ಕೊಡತಕ್ಕ ಮಂತಿಗೆ ಹಣವನ್ನು ಮನ್ನಾ ಮಾಡಬೇಕೆಂದು ಹೇಳುತ್ತೇನೆ. ರಿಪೋರ್ಟ್ ಬಂದ ನಂತರ ಇತ್ತೀಚೆಗೆ 5000 ರೂಪಾಯಿ ಪಾವತಿ ಮಾಡಿದ್ದಾರೆ, ಉಳಿದ ಹಣವನ್ನು ಮನ್ನಾ ಮಾಡಬೇಕು. ಅದಕ್ಕೆ ಜವಾಬು ಕೊಡಬೇಕು.

ಶ್ರೀ ಎಚ್. ಸಿದ್ದವೀರಪ್ಪ.—ಅದನ್ನು ಸಹಾನುಭೂತಿಯಿಂದ ಪರಿಶೀಲಿಸುತ್ತೇನೆ. ಅಂತಹ ಪರಿಸ್ಥಿತಿ ಏನಾದರೂ ಇದ್ದರೆ 10 ಪರ್ಸೆಂಟಾಗಲಿ, 5 ಪರ್ಸೆಂಟಾಗಲಿ ಇಳಿಸಬಹುದು. ಬಹಳ ಬಡವರು ಇದ್ದರೆ ಹಾಗೆ ನಾವು ಮನ್ನಾ ಮಾಡಬಹುದು ಎಂದು ಸರ್ಕಾರಕ್ಕೆ ಡಿಸ್ಕ್ರಿಷನ್ ಇದೆ. ಅದನ್ನು ನೋಡಿಬಿಟ್ಟು ಇಲ್ಲಿ ಮಾನ್ಯ ಸದಸ್ಯರು ಹೇಳತಕ್ಕ ಪರಿಸ್ಥಿತಿ ಇದ್ದಲ್ಲಿ ಅದನ್ನು ವಿಚಾರ ಮಾಡುತ್ತೇನೆ.

## Fourth Report of the Committee on Estimates Presentation

Sri K. F. PATIL.—I present the fourth Report of the Committee on Estimates on Roads, Rural Communications, Bridges and Buildings.

Mr. DEPUTY SPEAKER.—The report is presented.

## Statement of the Chief Minister *re* : Increase in DA to the School Teachers

ಶ್ರೀ ಡಿ. ದೇವರಾಜ ಅರಸ್ (ಮುಖ್ಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ನಿನ್ನೆ ದಿವಸ ಈ ಸಭೆಯಲ್ಲಿ ನಾನು ಉಪಾಧ್ಯಾಯರಿಗೆ ಸಂಬಂಧಪಟ್ಟ ಪ್ರಶ್ನೆ ಬಂದಾಗ ಅವರಿಗೆ ಕೊಡತಕ್ಕ ಡೈಲಿ ಅಲೋಯೆನ್ಸ್ ಬಗ್ಗೆ ಪರಿಶೀಲನೆ ಮಾಡಿ ಹೇಳುತ್ತೇನೆಂದು ಹೇಳಿದ್ದೆ. ಅದನ್ನು ಲೀಗಲ್ ಆಗಿ ಪರಿಶೀಲನೆ ಮಾಡುತ್ತಿದ್ದಾರೆ. ಎಲ್ಲರಿಗೂ ಜನರಲ್ ರೂಲ್ಸ್ ಅಪ್ಲೈ ಆಗುವುದಕ್ಕೆ ಕಾರಣ ಏಲ್ಲಿ ಎಂದು ಲೀಗಲ್ ಒಪೀನಿಯನ್ ಕೊಟ್ಟಿದ್ದಾರೆ. ಸ್ಕ್ರ್ಯಾಚುಟರಿ ಬೋರ್ಡ್ ಬೇರೆ ಇರುವುದರಿಂದ, ಆ ಬೋರ್ಡಿನವರು ಮಾಡತಕ್ಕ ಕಾರ್ಯ ಇದು. ಆದುದರಿಂದ ಬೇರೆ ಗವರ್ನಮೆಂಟ್ ಸರ್ವೆಂಟ್ಸ್‌ಗೆ ಅದು ಅಪ್ಲೈ ಆಗುವುದಿಲ್ಲ. It is a contract between them and the Board. ಎಂದು ಅವರು ಅಭಿಪ್ರಾಯ ಕೊಟ್ಟಿದ್ದಾರೆ. ನಾಳೆ ದಿವಸ ಬೋರ್ಡ್‌ನವರೊಂದಿಗೆ ಸರ್ಕಾರದವರು ಕೂತು ಮಾತನಾಡಿ, ಅಖೈರಾಗಿ ಎಷ್ಟು ಕೊಡುವುದಕ್ಕೆ ಸಾಧ್ಯವೋ, ಅದನ್ನು ಪರಿಶೀಲನೆ ಮಾಡಿಸಿ, ಅಂತಿಮವಾಗಿ ನಾಳೆ ಸ್ಟೇಟ್‌ಮೆಂಟನ್ನು ಮಾಡಿಸೋಣ.

## Use of Vanivilas Sagar Water for Agricultural Purposes in Hiriyur Taluk

ಶ್ರೀ ಎಸ್. ಬಂಗಾರಪ್ಪ (ಸೊರಬ).—ನಾನು ನಿನ್ನೆ ನಿಲುವಳಿ ಸೂಚನೆಯನ್ನು ಕಳುಹಿಸಿ ಕೊಟ್ಟಿದ್ದೆ. ಚಿತ್ರದುರ್ಗ ಜಿಲ್ಲೆಯ ಹಿರಿಯೂರು ತಾಲ್ಲೂಕಿನ ವಾಣಿವಿಲಾಸ ಸಾಗರ ವಿಷಯಕ್ಕೆ ಆದು ಸಂಬಂಧಪಟ್ಟದ್ದು. ವಾಣಿವಿಲಾಸ ಸಾಗರದಲ್ಲಿ 24 ಸಾವಿರ ಎಕರೆ ಆಚ್ಚುಕಟ್ಟು ಇದೆ, ಇದರಲ್ಲಿ 6 ಸಾವಿರ ಎಕರೆ ತೆಂಗು ಇದೆ. ಅಡಿಕೆ 4 ಸಾವಿರ ಎಕರೆ, ಕಬ್ಬು ಸುಮಾರು 4 ಸಾವಿರ ಎಕರೆ, ಭತ್ತ, ಸೇಂಗಾ, ಇತ್ಯಾದಿ ಸುಮಾರು 2 ಸಾಗಿರ ಎಕರೆಯಲ್ಲಿ ಹಾಲಿ ಫಸಲು ಇದೆ. ಈಗ ವಾಣಿವಿಲಾಸ ಸಾಗರಡಲ್ಲಿರತಕ್ಕ ನೀರಿನ ಬಗ್ಗೆ ಸಂಬಂಧಪಟ್ಟ ಇರಾಖೆಯವರು, ಜವಾಬ್ದಾರಿಯಿಂದ ನೀರನ್ನು ಹತೋಟಿಯಲ್ಲಿ ಇಡದೇ ಇರುವುದರಿಂದ, ಸಂಪೂರ್ಣವಾಗಿ ವಾಣಿವಿಲಾಸ ಸಾಗರದ ನೀರನ್ನು ಹಾಳು ಮಾಡಿ, ಸುಮಾರು 17 ಕೋಟಿ ರೂಪಾಯಿಗಳ ಅಂದಾಜು ನಷ್ಟವಾಗತಕ್ಕ ಪರಿಸ್ಥಿತಿ ಎದಿದೆ. ಮಾನ್ಯ ಉಪಾಧ್ಯಕ್ಷರಿಗೆ ಗೊತ್ತಿರುವ ಹಾಗೆ ಒಂದು ಆಡಿಕೆ

(ಶ್ರೀ ಎಸ್. ಬಂಗಾರಪ್ಪ)

ತೋಟ ಬೆಳೆಸಿ ಅದರಿಂದ ಫಸಲು ಬರಬೇಕಾದರೆ 10-12 ವರ್ಷ ಬೇಕಾಗುತ್ತದೆ. ಇದೇ 4 ಸಾವಿರ ಎಕರೆ ಅಡಿಕೆ ತೋಟ ಹಾಳಾಗಿ ಹೋಗುತ್ತದೆ, ಕಬ್ಬು ಹೋಗುತ್ತಿದೆ, ಭತ್ತ ಸೇಂಗ ಹೋಗುತ್ತಿದೆ ಜೊತೆಗೆ ಹಾಲು ಇರತಕ್ಕ ಷುಗರ್ ಫ್ಯಾಕ್ಟರಿಗೆ ಒಂದೂವರೆ ಕೋಟಿ ರೂಪಾಯಿ ನಷ್ಟ ಆಗುವ ಸಂದರ್ಭ ಇದೆ.

ಉಪಾಧ್ಯಕ್ಷರು.—ಇದು (ನಿಲುವಳಿ ಸೂಚನೆ ಆಗುವುದಿಲ್ಲ) I will see a statement is made. and the purpose is served. I am anxious that the hon. member should be helped because the people will be helped.

ಶ್ರೀ ಎಸ್. ಬಂಗಾರಪ್ಪ.—ಇದು ಸಾಮಾನ್ಯವಾದ ವಿಷಯವಲ್ಲ, ಮಾನ್ಯ ಸಚಿವರು ಇಲ್ಲಿಯೇ ಇರುವುದರಿಂದ ಕೇಳುತ್ತಿದ್ದೇನೆ. 17 ಕೋಟಿ ರೂಪಾಯಿ ನಷ್ಟವಾಗುತ್ತಿದೆ. ಅದಕ್ಕೋಸ್ಕರ ನಾನು ಉಪಾಧ್ಯಕ್ಷರನ್ನು ಕೇಳಿಕೊಳ್ಳುತ್ತಿದ್ದೇನೆ. 15-4-1974 ರಿಂದ ಸತ್ಯಾಗ್ರಹ ನಡೆಯುತ್ತಿದೆ. ಅಲ್ಲಿಯ ಹೆಣ್ಣುಮಕ್ಕಳೂ ಸತ್ಯಾಗ್ರಹದಲ್ಲಿ ಸೇರಿದ್ದಾರೆ. ಈಗಾಗಲೇ 50—60 ಜನರನ್ನು ಅರೆಸ್ಟ್ ಮಾಡಿದ್ದಾರೆ. ಪಿಕೇಟಿಂಗ್ ನಡೆಯುತ್ತಾ ಇದೆ. ಸರ್ಕಾರಕ್ಕೆ 3 ಕೋಟಿ ರೂಪಾಯಿಯಷ್ಟು ಎಕ್ಸೈಜ್ ಡ್ಯೂಟಿ ನಷ್ಟ ಆಗಿದೆ.

Mr. DEPUTY SPEAKER.—I will see that it is converted into a Call attention and I am sure the purpose will be served. ಎಷ್ಟು ಪ್ರಾಮುಖ್ಯತೆ ಕೊಡಬೇಕೋ ಅಷ್ಟು ಕೊಡುತ್ತೇವೆ.

Sri S. BANGARAPPA.—I follow why the Deputy Speaker is telling that.

Sri K. H. RANGANATH.—I represent that constituency. ಇದರಲ್ಲಿ ರಾಜಕಾರಣ ಮಾಡತಕ್ಕದ್ದು ಏನೂ ಇಲ್ಲ, ತಾವು ಅಷ್ಟೂಣ ಕೊಟ್ಟರೆ ಎರಡು ನಿಮಿಷದಲ್ಲಿ ಒಂದು ವಿಷಯವನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಸದಸ್ಯರಿಗಿಂತ ಹೆಚ್ಚಿನ ಜವಾಬ್ದಾರಿ ನಮಗೆ ಇದೆ.

Mr. DEPUTY SPEAKER.—We represent everybody. In the U.K. it is said that whoever is elected to the Parliament, he represents the entire State.

ಶ್ರೀ ಎಸ್. ಬಂಗಾರಪ್ಪ.—ಸರ್ಕಾರದ ವತಿಯಿಂದ ಹೇಳಿಕೆ ಕೊಡಿ, ಇವತ್ತಿನ ದಿವಸ ರೈತರು ಕಂಗಾಲಾಗಿದ್ದಾರೆ, It is not a small matter. ಮಾನ್ಯ ಸಚಿವರು ಹೇಳಿಕೆಯನ್ನು ಕೊಟ್ಟರೆ ನನ್ನ ಅಭ್ಯಂತರವಿಲ್ಲ.

Mr. DEPUTY SPEAKER.—It will have complications. The Hon. Member is not an ordinary member. He is more than a member. He is a Minister. The member will get reply in due course. That would be the better thing.

ಶ್ರೀ ಎಸ್. ಬಂಗಾರಪ್ಪ.—ಕಾಲಿಂಗ್ ಅಟೆನ್‌ಷನ್ ಮೋಷನ್ ಆಗಿ ಚರ್ಚೆ ಮಾಡುವುದಕ್ಕೆ ಅಭ್ಯಂತರವಿಲ್ಲ. ಸರ್ಕಾರದ ವತಿಯಿಂದ ಇವತ್ತು ಸಾಯಂಕಾಲ ಅಥವಾ ನಾಳೆ ಹೇಳಿಕೆ ಕೊಡುವುದಾದರೆ ಅಭ್ಯಂತರವಿಲ್ಲ. I am not putting any pressure. But the Government should see that this matter is given urgent consideration.

Sri H. M. CHANNABASAPPA.—The Government is as anxious as the Hon. Member is to see that whatever is possible is given. But when nature frowns it may be difficult very often even for human efforts to give the necessary relief. Any way Government will undertake to make a statement of facts before this House either tomorrow or the day after ascertaining all details.

Mr. DEPUTY SPEAKER.—There will be a statement on behalf of the Government as early as possible. The hon. Minister has given an assurance.

## Glucose Injections manufactured by Sarabhai Chemicals

Sri S. BANGARAPPA.—Hon. Minister said that he would make a statement tomorrow or the day after, I have given another adjournment Motion relating to another matter. This relates to Glucose injections. ಇದರಿಂದ ದೇಶದಲ್ಲಿ ಸುಮಾರು 20 ರಿಂದ 50 ಜನರು ಸತ್ತು ಹೋಗಿದ್ದಾರೆ. ಡಿಕ್ರುಸ್ಟಿಸಿನ್ ಸೂಜಿ ಮದ್ದನ್ನು ಪ್ರೊಡ್ಯೂಜ್ ಮಾಡತಕ್ಕ Sarabhai chemicals ಕಂಪನಿಯವರಿಂದ ಪಡೆದಂಥ ಔಷಧಿ, ಸೂಜಿ ಮದ್ದನ್ನು ತೆಗೆದುಕೊಂಡಿದ್ದರಿಂದ ಅನೇಕ ಜನ ಸತ್ತು ಹೋಗಿದ್ದಾರೆ. ನಮ್ಮ ರಾಜ್ಯ ಸರ್ಕಾರದವರು ಕೂಡ ಲಕ್ಷಾಂತರ ರೂಪಾಯಿ ಖರ್ಚು ಮಾಡಿ ಇಂಜೆಕ್ಷನ್ ಟ್ಯೂಬ್‌ಗಳನ್ನು ಖರೀದಿ ಮಾಡಿದ್ದಾರೆ. I have info mation yesterday morning that some people have suffered after taking injections in the Victoria Hospital in Bangalore.

ಉಪಾಧ್ಯಕ್ಷರು.—ಕಾನ್‌ಪುರದ ಸಲುವಾಗಿ ಬರೆದದ್ದು ಇದೆ. ಹೆಲ್ತ್ ಡಿಪಾರ್ಟ್‌ಮೆಂಟಿನವರು ವಿಜಿಲೆನ್ಸ್ ಕಮಿಷನರ್‌ರವರ ಸಹಾಯವನ್ನು ತೆಗೆದುಕೊಳ್ಳಬೇಕೆಂದು ಹೇಳಿದ್ದೀರಿ, ನಾನು ಅದನ್ನು ಅಪ್ರಿಷಿಯೇಟ್ ಮಾಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಜನ ಸತ್ತರೆ ನಿಲುವಳಿ ಸೂಚನೆ ಅಗತ್ಯವಾಗುತ್ತದೆಯೇ ? ರೂಲ್ಸ್ ಪ್ರಕಾರ ಜನ ಸತ್ತಮೇಲೇ ನಿಲುವಳಿ ಸೂಚನೆ ತೆಗೆದುಕೊಳ್ಳುವುದು ಎಂದರೆ ಕಷ್ಟವಾಗುತ್ತದೆ. It is a very urgent matter. ಅನೇಕ ಲಕ್ಷ ರೂಪಾಯಿಗಳಿವೆ. ಡಿಕ್ರುಸ್ಟಿಸಿನ್ ಇಂಜೆಕ್ಷನ್, ಗ್ಲೂಕೋಸ್ ಇಂಜೆಕ್ಷನ್ ಟ್ಯೂಬ್‌ಗಳನ್ನು ಹೆಲ್ತ್ ಡಿಪಾರ್ಟ್‌ಮೆಂಟಿನವರು ಖರೀದಿ ಮಾಡಿದ್ದಾರೆ. ಅದಕ್ಕೋಸ್ಕರ ಸರ್ಕಾರದ ವತಿಯಿಂದ ಹೇಳಿಕೆ ಕೊಟ್ಟು, at least the Government should see that sale of these products are stopped immediately. ಇಲ್ಲದಿದ್ದರೆ ಸಾರ್ವಜನಿಕರಿಗೆ ತೊಂದರೆಯಾಗುತ್ತದೆ.

ಶ್ರೀ ಹೆಚ್. ಎಂ. ಚನ್ನಬಸಪ್ಪ.—ತಮಗೆ ಈ ಬಗ್ಗೆ ಎಷ್ಟು ಅಭಿಮಾನ ಇದೆಯೋ ಅಷ್ಟೇ ಅಭಿಮಾನ ಸರ್ಕಾರಕ್ಕೂ ಇದೆ. ಇದನ್ನು ತಾಪು ಒಪ್ಪಬೇಕು ಆದುದರಿಂದ ತಾವು ಇದನ್ನು ಕಾಲ್ ಅಟೆನ್‌ಷನ್ ಆಗಿ ಕಳುಹಿಸಿಕೊಟ್ಟರೆ ಮುಂದೆ ಆಲೋಚನೆ ಮಾಡೋಣ.

ಉಪಾಧ್ಯಕ್ಷರು.—ಆಗಿರತಕ್ಕಂಥ ಅನ್ಯಾಯದ ಬಗ್ಗೆ ಅದನ್ನು ಸರಿಪಡಿಸಲು ಸರ್ಕಾರದವರು ಎಷ್ಟು ದಕ್ಷತೆ ವಹಿಸಬೇಕೋ ಅಷ್ಟನ್ನು ವಹಿಸಿತ್ತಾರೆ ಅವರು ತಿಳಿಸುತ್ತಾರೆ. ಇಷ್ಟು ಹೇಳಿದರೆ ತಮಗೆ ತೃಪ್ತಿ ಆಗಬಹುದು.

ಶ್ರೀ ಎಸ್. ಬಂಗಾರಪ್ಪ.—ಅದರ ಬಗ್ಗೆ ನಾನು ಹೆಚ್ಚು ವ್ಯಾಖ್ಯಾನ ಮಾಡುವುದಕ್ಕೆ ಹೋಗುವುದಿಲ್ಲ. ಸರ್ಕಾರದವರು ಆಲೋಚನೆ ಮಾಡಿ ಅನಂತರ ಹೇಳಿಕೆ ಕೊಡುತ್ತೇನೆ ಎಂದರೆ h is not ready with the statement.

Mr. DEPUTY SPEAKER.—I know the anxiety of the hon. Member.

Sri S. BANGARAPPA.—The Hon. Minister for Public Works is saying that a statement would be made in due course. That is a very vague statement.